OS No.124/2024 PW-1

**<u>ದಿನಾಂಕ 02.06.2026 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಬಿ ಆರ್ ಕೆ ವಕೀಲರಿಂದಃ</u>**

ನಿಪಿ-20 ಮತ್ತು ನಿಪಿ-21 ಪೋಟೋಗಳನ್ನು ನಮ್ಮ ಮನೆಯಲ್ಲಿ ತೆಗೆದಿದ್ದೇವೆ. ಸದರಿ ಪೋಟೋಗಳನ್ನು ನಾನೇ ತೆಗೆದಿರುತ್ತೇನೆ. ನನ್ನ ಪೋನ್ ನಿಂದ ತೆಗೆದಿರುತ್ತೇನೆ. ಸದರಿ ಪೋಟೋಗಳನ್ನು ಯಾರು ಮತ್ತು ಯಾವಾಗ ತೆಗೆದರು ಎಂದು ನ್ಯಾಯಾಲಯಕ್ಕೆ ಮಾಹಿತಿ ಕೊಟ್ಟಿಲ್ಲ ಎಂದರೆ ನಿಜ. ಈ ಪೋಟೋಗಳಿಗೂ ಮತ್ತು ಈ ಪ್ರಕರಣಕ್ಕೂ ಸಂಬಂದವಿಲ್ಲ ಎಂದರೆ ಸುಳ್ಳು. ಈ ಪೋಟೋಗಳನ್ನು ಸೃಷ್ಟಿ ಮಾಡಿರುತ್ತೇನೆಂದರೆ ಸುಳ್ಳು. ನಾನು ಪ್ರತಿವಾದಿಗೆ ಕೊಟ್ಟಿರುವ ಹಣದ ಬಗ್ಗೆ ಸದರಿ ಪೋಟೋಗಳಲ್ಲಿ ಇಲ್ಲ ಎಂದರೆ ಸುಳ್ಳು. ನಿಪಿ-35 Pen drive ನಲ್ಲಿರುವ ಪೋಟೋಗಳನ್ನು ನನಗೆ ನವೆಂಬರ್ 2020 ರಂದು 23 ರಲ್ಲಿ ಕಳುಹಿಸಿರುತ್ತಾರೆ. ನಾನು ಪ್ರತಿವಾದಿಯನ್ನು ಕ್ರಯ ಮಾಡಿಕೊಡಲು ಕೇಳಿದಾಗ ಸದರಿ Pen drive ನಲ್ಲಿರುವ ದಾಖಲೆಗಳನ್ನು ಕಳುಹಿಸಿರುತ್ತಾರೆ. ನಿಪಿ-1 ಕರಾರು ಪತ್ರಕ್ಕೆ ಪ್ರತಿವಾದಿ ನನ್ನ ಮನೆಯಲ್ಲಿಯೇ ನನ್ನ ಸಮ್ಮುಖದಲ್ಲಿಯೇ ಸಹಿ ಮಾಡಿರುತ್ತಾರೆ. ಆ ಸಮಯದಲ್ಲಿ ನಾನು ದಾಖಲೆಗಳನ್ನು ಪಡೆದಿಲ್ಲ. ರಿತೇಶ್ ಎನ್ನುವವರ ಪ್ರತಿವಾದಿಯ ಜೊತೆ ಮಾಡಿಕೊಂಡಿರುವ ಕರಾರು ಪತ್ರವನ್ನು ನನ್ನ ಒತ್ತಾಯಕ್ಕೆ ಮಣಿದು ಪ್ರತಿವಾದಿ ನನಗೆ ವಾಟ್ಸ್ ಆಪ್ ನಲ್ಲಿ ಸದರಿ ಕರಾರು ಪತ್ರದಲ್ಲಿ ಕಳುಹಿಸಿದ್ದರು ಎಂದರೆ ನಿಜ. ನಾನು ನಿವೇಶನದ ದಾಖಲೆಗಳನ್ನು ಕಳುಹಿಸಿಕೊಡಲು ವಾಟ್ಸ್ ಆಪ್ ನ ಮುಖಾಂತರ ಸಂದೇಶವನ್ನು ಪ್ರತಿವಾದಿಗೆ ಕಳುಹಿಸಿರುತ್ತೇನೆಂದರೆ ನಿಜ. ಇದರಂತೆ ಪ್ರತಿವಾದಿ ನನಗೆ ಕಳುಹಿಸಿದ ದಾಖಲೆಗಳನ್ನು ದುರುಪಯೋಗ ಪಡಿಸಿಕೊಂಡಿರುತ್ತೇನೆಂದರೆ ಸುಳ್ಳು. ಪ್ರತಿವಾದಿ ಕೊಟ್ಟ ಖಾಲಿ ಪೇಪರ್ ಅನ್ನು ನಾನು ದುರುಪಯೋಗ ಪಡಿಸಿಕೊಂಡಿರುತ್ತೇನೆಂದರೆ ಸುಳ್ಳು.

**<u>ಮರುವಿಚಾರಣೆಃ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)

ಓ.ಹೇ.ಕೇ.ಸ.ಒ

(ವೆಂಕಟೇಶಪ್ಪ. ವಿ)
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.